**PG – 806**

**I Semester M.T.T.M. (Integrated Course) Degree Examination, December 2015**
**(Semester Scheme)**
**(2014-15 and Onwards) (CBCS)**
**Tourism and Travel Management**
**Paper – 1.2 : Language Kannada – I**
**ಸುವರ್ಣ ಸಂಪದ**

Time : 3 Hours Max. Marks : 70

I. ಅ) ಒಂದು ಪದ್ಯದ ಸಾರಾಂಶವನ್ನು ಬರೆಯಿರಿ : **(1×6=6)**

1) ಮನೆಮನೆಯಲ್ಲಿ ನೀನಾಗಿಹೆ ಗೃಹಶ್ರೀ
ಹೆಸರಿಲ್ಲದ ಹೆಸರು ನಿನಗೆ 'ಗೃಹಸ್ತ್ರೀ' !
ಹೇ ದಿವ್ಯೆ ಸಾಮಾನ್ಯೆ
ಹೇ ಭವ್ಯೆ ದೇವಮಾನ್ಯೆ
ಚಿರಂತನ ಅಕೀರ್ತಿಕನ್ಯೆ,
ಅನ್ನಪೂರ್ಣೆ, ಅಹಂಶೂನ್ಯೆ,
ನಮೋ ನಿನಗೆ ನಿತ್ಯಧನ್ಯೆ!

2) ಬಡವ ಬಲ್ಲಿದರೆಂಬ ಜಾತಿಗೀತಿಗಳೆಂಬ
ವಿಷಮತೆಯ ನಂಟೇಕೆ ಹೊಸ ಬಾಳಿಗೆ ?
ಹೆಣ್ಣೆಂದು ಹೀಗಳೆವ ಕುನ್ನಿತನವಿನ್ನೇಕೆ ?
ಕಸವೇಕೆ ನಳನಳಿಪ ಹುಲುಸು ಬೆಳೆಗೆ ?

ಆ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2×2=4)**

1) ಕೆ. ಎಸ್. ನರಸಿಂಹಸ್ವಾಮಿ
2) ಅಡುಗೆಮನೆ
3) ಸಂಸ್ಕೃತಿ
4) ಚೆನ್ನವೀರ ಕಣವಿ.

ಇ) ಒಂದು ಪ್ರಶ್ನೆಗೆ ವಿವರವಾದ ಉತ್ತರವನ್ನು ಬರೆಯಿರಿ : **(1×10=10)**

1) ಜನಮಾನಸದ ಸಂಸ್ಕೃತಿ ಮಹಿಳೆಯಿಂದಲೇ ಉಳಿದು ಬಂದಿದೆಯೇ ಎಂಬುದನ್ನು 'ಮನೆ ಮನೆಯ ತಪಸ್ವಿನಿಗೆ' ಕವಿತೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.
2) ಸಮಾಜವಾದಿ ಆಶಯವು 'ಹೊಸ ಬಾಳು ನಮ್ಮದಿದೆ' ಎಂಬ ಕವಿತೆಯಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.



KLE'S IMS MTTM

II. ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (2×5=10)

1) ಚಿನ್ನಮ್ಮನ ಬಗೆಗೆ ಕಥಾನಾಯಕನಿಗೆ ಅನುಕಂಪ ಮೂಡಲು ಕಾರಣಗಳನ್ನು ವಿವರಿಸಿ.

2) ಧ್ವಜಾರೋಹಣ ಸಂದರ್ಭದಲ್ಲಿ ಆದ ಗಲಾಟೆಯನ್ನು ವಿವರಿಸಿ.

3) ಶಬೀರ್ ವ್ಯಕ್ತಿತ್ವವನ್ನು ಪರಿಚಯಿಸಿ.

ಆ) ಒಂದು ಪ್ರಶ್ನೆಗೆ ವಿವರವಾದ ಉತ್ತರವನ್ನು ಬರೆಯಿರಿ : (1×10=10)

1) 'ಚಪ್ಪಲಿಗಳು' ಕಥೆಯ ಸ್ವಾರಸ್ಯವನ್ನು ಬರೆಯಿರಿ.

2) 'ಒಡಲು' ಕಥೆಯ ಸ್ವಾರಸ್ಯವನ್ನು ಬರೆಯಿರಿ.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಜಗತ್ತಿನ ಆಹಾರದ ಅಸಮತೋಲನದ ಬಗ್ಗೆ ಲೇಖನದಲ್ಲಿ ವ್ಯಕ್ತವಾಗಿರುವ ಅಂಶಗಳಾವುವು ? ವಿವರಿಸಿ.

2) ಭಾವನಾ ಜಗತ್ತಿಗೆ ಹೆಣ್ಣಿಗೆ, ವಸ್ತುನಿಷ್ಠತೆ ಗಂಡಿಗೆ ಮಾತ್ರ ಸೀಮಿತವೇ ? ಚರ್ಚಿಸಿ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) ಕನ್ನಡವನ್ನು ಬೆಳೆಸಲು ಒಳಮುಖಿ ಮತ್ತು ಹೊರಮುಖಿ ನೆಲೆಗಳಾವುವು ? ವಿವರಿಸಿ.

2) ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೃಷಿಯಲ್ಲಿ ಅನುಸರಿಸುತ್ತಿರುವ ಆಧುನಿಕತೆಯ ಅಂಶಗಳಾವುವು ? ವಿಶದಪಡಿಸಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಮಾರಾಟ ಪ್ರತಿನಿಧಿಗಳಾಗುವವರು ಯಾರು ? ಅವರ ಕೆಲಸವೇನು ?

2) ಗುರುಭಕ್ಷ್ ಚಾಹಲ್‌ನ ಯಶಸ್ಸಿನ ಘಟ್ಟಗಳನ್ನು ವಿವರಿಸಿ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) ಯಶಸ್ವಿ ಉದ್ಯೋಗಿ ಎನಿಸಿಕೊಳ್ಳಲು ಬೇಕಾಗಿರುವ ಸಂಗತಿಗಳಾವುವು ? ಚರ್ಚಿಸಿ.

2) ಕೋಕಕೋಲವನ್ನು ಸೋಲಿಸಲು ಕೋಕಕೋಲಾದಿಂದ ಮಾತ್ರ ಸಾಧ್ಯವೇ ? ವಿವರಿಸಿ

---

KLE SJC MTTM